ಚಂಗಾರು ಮತ್ತು ಮಹಿಷ ಸೇತುವೆ ನಿರ್ಮಾಣ

281 (107) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) :– ಮಾನ್ಯ ಲೋಕೋಪಯೋಗಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೀರ್ಥಹಳ್ಳಿ ತಾಲ್ಲೂಕು, ಆಗುಂಬೆ ಹೋಬಳಿಯ ಮೂಲತಿ ನದಿಗೆ ಚಂಗಾರು ಸೇತುವೆ ಮಂಜೂರಾಗಿ ಶಂಕುಸ್ಥಾಪನೆಯಾಗಿದ್ದು, ಅಂತೆಯೇ ತೀರ್ಥಹಳ್ಳಿ, ತಾಲ್ಲೂಕಿನ ಮಂಡಗದ್ದೆ ಹೋಬಳಿಯ ಮಹಿಷಿಯಲ್ಲಿ ತುಂಗಾ ನದಿಗೆ ಸೇತುವೆ ಮಂಜೂರಾಗಿ ಶಂಕುಸ್ಥಾಪನೆಯಾಗಿದ್ದು, ಈವರೆವಿಗೂ ಕಾಮಗಾರಿ ಕೈಗೆತ್ತಿಕೊಳ್ಳದಿರಲು ಕಾರಣವೇನು;

ಆ) ಸೇತುವೆ ಕಾಮಗಾರಿ ಕೈಗೆತ್ತಿಕೊಳ್ಳಲು ಹಣಕಾಸಿನ ತೊಂದರೆಯೇನಾದರೂ ಇದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ರೂ. 353.00 ಕೋಟಿ ರೂ.ಗಳ ಹೆಚ್ಚುವರಿ ಅನುದಾನವನ್ನು ಪೂರೈಸಿಕೊಂಡು ಕೈಗೊಳ್ಳಬೇಕಾಗಿರುವ ಸೇತುವೆಗಳ ಪಟ್ಟಿಯಲ್ಲಿ ಈ ಯೋಜನೆಯು ಸೇರ್ಪಡೆಗೊಂಡಿದೆ.

ಅನುದಾನದ ಲಭ್ಯತೆ ಅನುಸಾರ ಕಾಮಗಾರಿ ಕೈಗೊಳ್ಳಲು ಪರಿಶೀಲಿಸಲಾಗುವುದು.

ಆ) ಅನುದಾನದ ಲಭ್ಯತೆ ಅನುಸಾರ ಕಾಮಗಾರಿ ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

ಲೋಕೋಪಯೋಗಿ ಇಲಾಖೆ ರಸ್ತೆ

280 (106) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) :– ಮಾನ್ಯ ಲೋಕೋಪಯೋಗಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪಿಡಬ್ಲ್ಯುಡಿ ಇಲಾಖೆಗೆ ಸೇರಿದ ಎಷ್ಟು ಕಿ.ಮೀ. ರಸ್ತೆ ಇದೇ ಹಾಗೂ ಅವುಗಳ ರಿಪೇರಿಗೆ ಯಾವಾಗ ಹಣ ಮಂಜೂರು ಮಾಡಲಾಗುವುದು (ಹೋಬಳಿವಾರು ವಿವರ ನೀಡುವುದು ಎನ್.ಹೆಚ್. ಸೇರಿ)

ಆ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಆಗುಂಬೆ ಘಾಟ್, ಹುಲಿಕಲ್ ಘಾಟ್ ಮತ್ತು ಕೊಲ್ಲೂರು ಘಾಟ್‌ಗಳಿವೆ ಅವುಗಳ ರಸ್ತೆಯನ್ನು ಯಾವಾಗ ಸರಿಪಡಿಸಲಾಗುವುದು, ಹಣ ಬಿಡುಗಡೆಯಾಗಿದೆಯೇ?

ಇ) ಘಾಟುಗಳ ರಸ್ತೆಗಳನ್ನು ಸರಿಪಡಿಸಲು ಎಷ್ಟು ಹಣ ನಿಗದಿಪಡಿಸಲಾಗಿರುತ್ತದೆ.

(ಈ) ಹಾಗಿದ್ದಲ್ಲಿ, ಬಿಡುಗಡೆಯಾದ ಹಣವೆಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೋಬಳಿವಾರು ರಸ್ತೆ ಉದ್ದ ವಿವರ ಕೆಳಗಿನಂತಿದೆ.

ಕ್ರ. ಸಂ.	ವಿಧಾನ ಸಭಾ ಕ್ಷೇತ್ರ		ತಾಲ್ಲೂಕು	ಹೋಬಳಿ	ರಸ್ತೆ ಉದ್ದ (ಕಿ.ಮೀ.) ರಾಜ್ಯ ಹೆದ್ದಾರಿ	ಜಿ.ಮು.ರ
1	ತೀರ್ಥಹಳ್ಳಿ	1	ತೀರ್ಥಹಳ್ಳಿ	ಕಸಬ	43.88	60.70
				ಮಂಡಗದ್ದೆ	26.80	124.90
				ಅಗ್ರಹಾರ	19.30	60.90
				ಆಗುಂಬೆ	36.50	43.70
				ಮತ್ತೂರು	20.30	72.60
			ಒಟ್ಟು ತೀರ್ಥಹಳ್ಳಿ ತಾ:		**146.78**	**362.80**
		2	ಶಿವಮೊಗ್ಗ	ನಿದಿಗೆ	11.13	20.70
			ಒಟ್ಟು ಶಿವಮೊಗ್ಗ ತಾ:		**11.13**	**20.70**
		3	ಹೊಸನಗರ	ನಗರ	64.30	86.60
				ಹುಂಚಾ	21.00	47.20
			ಒಟ್ಟು ಹೊಸನಗರ ತಾ:		**85.30**	**133.80**
			ಒಟ್ಟು ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರ		**243.21**	**517.30**

ಮೇಲಿನ ವಿವರಗಳಂತೆ ಸದರಿ ರಸ್ತೆಗಳ ನಿರ್ವಹಣೆಗೆ ಪ್ರಸಕ್ತ 2011–12ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರ ಕೆಳಗಿನಂತಿದೆ.

ಕ್ರ. ಸಂ.	ವಿಧಾನ ಸಭಾಕ್ಷೇತ್ರ	ರಾಜ್ಯ ಹೆದ್ದಾರಿ		ಜಿಲ್ಲಾ ಮುಖ್ಯ ರಸ್ತೆ	
		ರಸ್ತೆ ಉದ್ದ (ಕಿ.ಮೀ)	ಬಿಡುಗಡೆಯಾದ ಅನುದಾನ (ರೂ.ಲಕ್ಷ)	ರಸ್ತೆ ಉದ್ದ (ಕಿ.ಮೀ)	ಬಿಡುಗಡೆಯಾದ ಅನುದಾನ (ರೂ.ಲಕ್ಷ)
1	ತೀರ್ಥಹಳ್ಳಿ	243.21	103.65	517.30	151.19

ಆ) **ಆಗುಂಬೆ ಘಾಟ್:**

ಆಗುಂಬೆ ಘಾಟ್ ರಸ್ತೆಯ ಅಭಿವೃದ್ಧಿಗಾಗಿ ಲೆ.ಶೀ. 5054–ಪಶ್ಚಿಮ ಘಟ್ಟ ಪ್ರದೇಶಾಭಿವೃದ್ಧಿಯಡಿ ರೂ. 495.00 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುಮೋದನೆಗೊಂಡಿದ್ದು, ಸವಿವರವಾದ ಯೋಜನಾ ವರದಿ ತಯಾರಿಕೆ ಹಂತದಲ್ಲಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಹುಲಿಕಲ್ ಘಾಟ್ :

ಹುಲಿಕಲ್ ಘಾಟ್ 2011–12ನೇ ಸಾಲಿನಲ್ಲಿ ಲೆ.ಶೀ. 5054–ಪಶ್ಚಿಮ ಘಟ್ಟ ಪ್ರದೇಶಾಭಿವೃದ್ಧಿಯಡಿ ರೂ. 495.00 ಲಕ್ಷಗಳು ಮತ್ತು ಇತರೆ ರಸ್ತೆ ನಿರ್ಮಾಣದಡಿ ರೂ. 180.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕಾಮಗಾರಿಯ ಸವಿವರವಾದ ಯೋಜನಾ ವರದಿ ತಯಾರಿಕೆ ಹಂತದಲ್ಲಿದ್ದು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಕೊಲ್ಲೂರು ಘಾಟ್ :

ಕೊಲ್ಲೂರು ಘಾಟ್ ರಸ್ತೆಯ ಅಭಿವೃದ್ಧಿಗಾಗಿ ಲೆ.ಶೀ. 5054–ಪಶ್ಚಿಮ ಘಟ್ಟ ಪ್ರದೇಶಾಭಿವೃದ್ಧಿಯಡಿ ರೂ. 400.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿಯ ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ.

ಇ) **ನಿಗದಿಪಡಿಸಲಾದ ಮೊತ್ತ :**

ಆಗುಂಬೆ ಘಾಟ್ : ರೂ. 495.00 ಲಕ್ಷಗಳು

ಹುಲಿಕಲ್ ಘಾಟ್ : ರೂ. 675.00 ಲಕ್ಷಗಳು

ಕೊಲ್ಲೂರು ಘಾಟ್ : ರೂ. 400.00 ಲಕ್ಷಗಳು

ಈ) ಕಾಮಗಾರಿಗಳ ಡಿಪಿಆರ್ ತಯಾರಿಕೆ ಹಂತದಲ್ಲಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾರಣ ಹಣ ಬಿಡುಗಡೆಯಾಗಿರುವುದಿಲ್ಲ.

ಬಿದ್ದು ಹೋದ ಫಾರೆಸ್ಟ್ ಕಟ್ಟಡಗಳನ್ನು ತೆಗೆಯುವುದು

282 (345) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) :– ಮಾನ್ಯ ಲೋಕೋಪಯೋಗಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಜಮಖಂಡಿ ನಗರ ಮಧ್ಯಭಾಗದಲ್ಲಿ ಇರುವ ಹಳೆಯ ಅರಣ್ಯ ಕಛೇರಿಗೆ ಬಳಸುತ್ತಿದ್ದ ಕಟ್ಟಡಗಳು ಸಂಪೂರ್ಣ ಬಿದ್ದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಜನನಿಬಿಡ ಪ್ರದೇಶದಲ್ಲಿ ಇರುವ ಹಾಗೂ ಸಾರ್ವಜನಿಕ ಪ್ರಾಣಕ್ಕೆ ಕುತ್ತು ತರಬಹುದಾದ ಇವುಗಳನ್ನು ತಕ್ಷಣ ತೆಗೆದು (Dismental) ಹಾಕಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಇ) ನಗರ ಮಧ್ಯಭಾಗದಲ್ಲಿಯ ಈ ಪ್ರದೇಶವನ್ನು ವಾಹನಗಳ ನಿಲುಗಡೆ ಇತ್ಯಾದಿ ನಿರ್ಮಿಸಲು ನಗರಸಭೆಗೆ ಹಸ್ತಾಂತರಿಸಲಾವುದೇ?

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು):–

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕ್ರಮ ತೆಗೆದು ಕೊಳ್ಳಲಾಗುವುದು.

ಇ) ಈ ಪ್ರಸ್ತಾವನೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಕಾರ್ಖಾನೆಗಳಿಂದ ಬಂದಿರುವ ಕರ (ಸೆಸ್)

283 (346) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) :– ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಮೂಲಕ ಸಂಗ್ರಹವಾಗಿರುವ ಸೆಸ್ (ಕರ)